# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-7413/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 30/03/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ವೆನ್ನೆಟ್ ಡಿಸಿಲ್ವಾ, ಚಾಂತಾರು – ಕೊಳಂಬೆ, ಬ್ರಹ್ಮಾವರ, ಉಡುಪಿ ತಾಲ್ಲೂಕು ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ವೆನ್ನೆಟ್ ಡಿಸಿಲ್ವಾ ಇವರು ಗೌರವಾನ್ವಿತ ಲೋಕಾಯುಕ್ತರ ಉಡುಪಿ ಪ್ರವಾಸದಲ್ಲಿ ದೂರೊಂದನ್ನು ಸಲ್ಲಿಸಿ ಉಡುಪಿ ತಾಲ್ಲೂಕು ಚಾಂತಾರು ಗ್ರಾಮದ ಪಂಚಾಯತಿ ವತಿಯಿಂದ ಸರ್ವೇ ನಂ.121/3ಬಿ ಯಲ್ಲಿ ಅನಧಿಕೃತವಾಗಿ ತಿಪ್ಪೆಗುಂಡಿಯನ್ನು ರಚಿಸಿದ್ದು, ಅದರಲ್ಲಿ ಸುತ್ತಮುತ್ತಲಿನ ವಸತಿ ಸಂಕೀರ್ಣಗಳಿಂದ ಹಾಗೂ ಹೋಟೇಲ್‌ನಿಂದ ತ್ಯಾಜ್ಯವನ್ನು ವಿಲೇವಾರಿ ಮಾಡುತ್ತಿದ್ದು, ಸದರಿ ತಿಪ್ಪೆಗುಂಡಿಯ ಹತ್ತಿರದಲ್ಲಿ ಮನೆ ಇರುವ ದೂರುದಾರರಿಗೆ ಹಾಗೂ ಇತರೆ ಗ್ರಾಮಸ್ಥರಿಗೆ ಸದರಿ ತ್ಯಾಜ್ಯದ ವಾಸನೆಯಿಂದ ತೊಂದರೆ ಉಂಟಾಗಿರುತ್ತದೆ. ಸದರಿ ಕೆಟ್ಟ ವಾಸನೆಯು ಎಲ್ಲ ಕಡೆಗೂ ಹರಡಿ ಆರೋಗ್ಯದ ಮೇಲೂ ಸಹ ದುಷ್ಪರಿಣಾಮ ಬೀರುತ್ತಿರುತ್ತದೆ. ಆದ್ದರಿಂದ, ಗ್ರಾಮಸ್ಥರು ಹಾಗೂ ದೂರುದಾರರು ಸದರಿ ತಿಪ್ಪೆಗುಂಡಿಯನ್ನು ಸ್ಥಳಾಂತರಿಸಬೇಕೆಂದು ಕೋರಿಕೊಂಡಿದ್ದರೂ ಸಹ, ಇದುವರೆಗೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ, ಈ ಬಗ್ಗೆ ಎದುರುದಾರರ ವಿರುದ್ಧ ಸೂಕ್ತ ಕ್ರಮ ಜರುಗಿಸಿ ತಮ್ಮ ತೊಂದರೆ ನಿವಾರಿಸಿಕೊಡಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಈ ದೂರಿನ ಬಗ್ಗೆ ಗೌರವಾನ್ವಿತ ಲೋಕಾಯುಕ್ತರು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ದೂರಿನ ಅಂಶಗಳ ಬಗ್ಗೆ ತನಿಖೆ ನಿರ್ವಹಿಸಿ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿದ್ದು, ಅದರಂತೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ವರದಿಯನ್ನು ಸಲ್ಲಿಸಿ,

ವಿಚಾರಣಾ ವರದಿಯಲ್ಲಿ ತಿಪ್ಪೇಗುಂಡಿಯನ್ನು 2001ನೇ ಇಸವಿಯಲ್ಲಿ ಚಾಂತಾರು ಗ್ರಾಮ ಪಂಚಾಯತಿ ವ್ಯಾಪ್ತಿಯ ಘನ ತ್ಯಾಜ್ಯ ವಿಲೇವಾರಿಗೆ ಸ್ವಚ್ಛ ಗ್ರಾಮ ಯೋಜನೆಯಡಿ ಸ್ವಚ್ಛ ಗ್ರಾಮ ಉಸ್ತುವಾರಿ ಸಮಿತಿಯ ಮೇಲ್ವಿಚಾರಣೆಯಲ್ಲಿ ಚಾಂತಾರು ಗ್ರಾಮದ ಬ್ರಹ್ಮಾವರ–ಹೆಬರಿ ರಸ್ತೆಯ ಕೊಳಂಬೆ ಸಮೀಪ ತಿಪ್ಪೇಗುಂಡಿಯನ್ನು ರಚನೆ ಮಾಡಲಾಗಿರುತ್ತದೆ. ಚಾಂತಾರು ಗ್ರಾಮದ ಪಂಚಾಯತಿ ವ್ಯಾಪ್ತಿಯ ಬಹುಮಹಡಿ ಕಟ್ಟಡಗಳ ಮಾಲೀಕರು, ಹೋಟೆಲ್, ಅಂಗಡಿ ಮತ್ತು ಬಾರ್ ಮತ್ತು ರೆಸ್ಟೋರೆಂಟ್ ಮಾಲೀಕರ ಸಭೆಯನ್ನು ಕರೆದು ಚರ್ಚಿಸಲಾಗಿ, ಚಾಂತಾರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಖಾಲಿ ಇರುವ ಜಮೀನು ಲಭ್ಯವಿರುವುದಿಲ್ಲವೆಂದು ವಸತಿ ವಾಣಿಜ್ಯ ಸಂಕೀರ್ಣಗಳಿಂದ ಉತ್ಪತ್ತಿಯಾಗುವ ತ್ಯಾಜ್ಯಗಳನ್ನು ಹೊರಗುತ್ತಿಗೆ ಏಜೆನ್ಸಿ ಗೊತ್ತುಪಡಿಸಿ ಅವರುಗಳ ಹಂತದಲ್ಲಿಯೇ ವಿಲೇವಾರಿಗೊಳಿಸಲು ತಿಳಿಸಲಾಗಿರುತ್ತದೆ. ಹಾಗೂ ಈ ಸಂಬಂಧವಾಗಿ ಸಂಬಂಧಿಸಿದವರಿಗೆ ನೋಟೀಸನ್ನು ಜಾರಿ ಮಾಡಲಾಗಿರುತ್ತದೆ. ದಿನವೊಂದಕ್ಕೆ ಅಂದಾಜು 1 ಟನ್ ಅಷ್ಟು ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಸುತ್ತುಮುತ್ತಲಿನ ಗ್ರಾಮ ಪಂಚಾಯತಿಗಳಲ್ಲಿ ತ್ಯಾಜ್ಯ ವಿಲೇವಾರಿ ತೀವ್ರ ಸಮಸ್ಯೆಯಾಗಿರುತ್ತದೆ. ದೂರುದಾರರು ನೀಡಿರುವ ದೂರಿನಲ್ಲಿ ತಿಳಿಸಿರುವ ತ್ಯಾಜ್ಯ ಗುಂಡಿಯ ಸಮೀಪದಲ್ಲಿ ಹಲವು ಮನೆಗಳಿದ್ದು, ಮುಖ್ಯ ರಸ್ತೆಯ ಪಕ್ಕದಲ್ಲಿಯೇ ತ್ಯಾಜ್ಯ ಗುಂಡಿ ಇರುತ್ತದೆ. ಇದು ತ್ಯಾಜ್ಯ ವಿಲೇವಾರಿಗೆ ಸೂಕ್ತ ಜಾಗವಾಗಿರುವುದಿಲ್ಲ. ಸರ್ಕಾರಿ ಜಮೀನಿನ ಲಭ್ಯವಾಗುತ್ತಿರುವುದಿಲ್ಲ. ಆದ್ದರಿಂದ, ಬ್ರಹ್ಮಾವರ ಕೃಷಿ ಕೇಂದ್ರ ಖಾಲಿ ಇರುವ ಜಾಗವನ್ನು ಘನ ತ್ಯಾಜ್ಯ ಘಟಕ ವಿಲೇವಾರಿ ಸ್ಥಾಪನೆಗಾಗಿ ಮಂಜೂರು ಮಾಡುವಂತೆ ಜಿಲ್ಲಾಧಿಕಾರಿಯವರನ್ನು ಕೋರಿಕೊಳ್ಳಲಾಗಿದೆ.

3. ಜಿಲ್ಲಾಧಿಕಾರಿಯವರು ಸ್ಥಳ ಪರಿಶೀಲನೆ ಮಾಡಿ ಪೂರಕ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಬ್ರಹ್ಮಾವರದ ವಿಶೇಷ ತಹಶೀಲ್ದಾರ್‌ರವರಿಗೆ ನಿರ್ದೇಶನ ನೀಡಿರುತ್ತಾರೆ. ಆದ್ದರಿಂದ, ಸದರಿ ಸೂಕ್ತ ಜಾಗ ಲಭ್ಯವಾಗುವವರೆಗೂ ನಿರಂತರವಾಗಿ 15 ದಿನಗಳಿಗೊಮ್ಮೆ ಶೇಖರಣೆಯಾದ ತ್ಯಾಜ್ಯವನ್ನು ಸಾಗಾಟ ಮಾಡಿ ಸ್ವಚ್ಛತೆ ಕಾಪಾಡುವುದಾಗಿ ತಿಳಿಸಿರುತ್ತಾರೆ. ಸದರಿ ವರದಿಯ ಪ್ರತಿಯನ್ನು ದೂರುದಾರರಿಗೆ ಕಳುಹಿಸಿ ಅವರ ಪ್ರತ್ಯುತ್ತರವನ್ನು ಪಡೆಯಲಾಗಿದ್ದು, ದೂರುದಾರರು ದೂರಿನಂಶಗಳನ್ನೇ ಪುನರುಚ್ಚರಿಸಿರುತ್ತಾರೆ. ಹಾಗೇ ಸದರಿ ಘನ ತ್ಯಾಜ್ಯದಿಂದ ಸುತ್ತಮುತ್ತಲಿನ ಜನರಿಗೆ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ ಎಂದು ತಿಳಿಸಿರುತ್ತಾರೆ.

4. ಈ ಹಂತದಲ್ಲಿ ಉಡುಪಿ ಜಿಲ್ಲಾಧಿಕಾರಿಯವರಿಂದ ವರದಿಯನ್ನು ಕರೆಯಲಾಗಿದ್ದು, ಜಿಲ್ಲಾಧಿಕಾರಿಯವರು ತಮ್ಮ ಪತ್ರದಲ್ಲಿ ಉಡುಪಿ ತಾಲ್ಲೂಕು ಚಾಂತಾರು ಗ್ರಾಮದ ಸರ್ವೇ ನಂಬರ್ 121/3ಬಿಯ 0.16 ಎಕರೆ ಪೊರಂಬೋಕು ತೋಡು ಜಮೀನನ್ನು ಗ್ರಾಮ ಪಂಚಾಯತಿಗೆ

ತಿಪ್ಪೇಗುಂಡಿಗಾಗಿ ನೀಡಿರುವುದಿಲ್ಲ. ಅಲ್ಲಿ ಅನಧೀಕೃತವಾಗಿ ತಿಪ್ಪೇಗುಂಡಿ ರಚಿಸಿ ತ್ಯಾಜ್ಯ ವಿಲೇವಾರಿ ಮಾಡುತ್ತಿರುವುದು ಕಂಡು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ.

5. ಈ ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ಚಾಂತಾರು ಗ್ರಾಮದ ಸರ್ವೇ ನಂಬರ್ 121/3ಬಿಯಲ್ಲಿ ಪೊರಂಬೋಕು ತೋಡಿನಲ್ಲಿ ಅನಧಿಕೃತವಾಗಿ ಗ್ರಾಮ ಪಂಚಾಯತಿ ವತಿಯಿಂದ ತಿಪ್ಪೇಗುಂಡಿಯನ್ನು ರಚಿಸಲಾಗಿದ್ದು, ಅಲ್ಲಿ ಘನ ತ್ಯಾಜ್ಯವನ್ನು ವಿಲೇವಾರಿ ಮಾಡುತ್ತಿರುವುದು ಸ್ಪಷ್ಟ ಪಟ್ಟಿರುತ್ತದೆ. ಈ ಅನಧಿಕೃತ ತ್ಯಾಜ್ಯ ವಿಲೇವಾರಿಯ ಬಗ್ಗೆ ಉಡುಪಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸಹ ಸದರಿ ತಿಪ್ಪೇಗುಂಡಿಯನ್ನು ಸ್ಥಳಾಂತರಿಸುವ ಬಗ್ಗೆ ತಮ್ಮ ಮೇಲೆ ಹೇಳಿದ ವರದಿಯಲ್ಲಿ ತಿಳಿಸಿರುತ್ತಾರೆ ಹಾಗೂ ಈ ಬಗ್ಗೆ ಬ್ರಹ್ಮಾವರದ ವಿಶೇಷ ತಹಶೀಲ್ದಾರ್‌ರವರ ಮೂಲಕ ಬೇರೆ ಜಾಗವನ್ನು ಕೋರಿ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಯವರಿಗೆ ಸಲ್ಲಿಸಲು ಕ್ರಮ ಜರುಗಿಸಲು ನಿರ್ದೇಶನ ನೀಡಿರುವುದು ಕಂಡು ಬರುತ್ತದೆ. ಇದಲ್ಲದೇ, ಸದರಿ ತಿಪ್ಪೇಗುಂಡಿಯಿಂದ ಸುತ್ತಮುತ್ತಲಿನ ಪರಿಸರದಲ್ಲಿ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದು ಕಂಡು ಬರುತ್ತದೆ.

6. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಉಡುಪಿ ತಾಲ್ಲೂಕು, ಚಾಂತಾರು ಗ್ರಾಮ ಪಂಚಾಯತಿ ವತಿಯಿಂದ ಸರ್ವೇ ನಂ.121/3ಬಿ ಯಲ್ಲಿ ಅನಧೀಕೃತವಾಗಿ ತಿಪ್ಪೆಗುಂಡಿಯನ್ನು ರಚಿಸಿದ್ದು, ಸದರಿ ತಿಪ್ಪೇಗುಂಡಿಯನ್ನು ಸ್ಥಳಾಂತರಿಸಿ, ಸದರಿ ತಿಪ್ಪೇಗುಂಡಿಯಿಂದ ಸುತ್ತಮುತ್ತಲಿನ ಪರಿಸರದಲ್ಲಿ ಉಂಟಾಗುತ್ತಿರುವ ಮಾಲಿನ್ಯವನ್ನು ತಡೆಗಟ್ಟಲು ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 30/3/17

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**

30/3/17